# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./2692/2021 ಬಹುಮಹಡಿಗಳ ಕಟ್ಟಡ,
ಪಿ.ಓ. ಎ.ಆರ್.ಇ-06 (ಮಂಡನಾಧಿಕಾರಿಯವರ ಶಾಖೆ.) ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 30/04/2022.
05/05/2022

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

**ವಿಷಯ: ಶ್ರೀ. ಶ್ಯಾಂ ತಾಂಬೆ ಬಿನ್ ಶ್ರೀ. ಚಂದ್ರಕಾಂತ್, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು, ಚಿಕ್ಕಮಗಳೂರು ಜಿಲ್ಲೆರವರು** ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ಚಿಕ್ಕಮಗಳೂರು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಶ್ಯಾಂ ತಾಂಬೆ ಬಿನ್ ಶ್ರೀ. ಚಂದ್ರಕಾಂತ್, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು, ಚಿಕ್ಕಮಗಳೂರು ಜಿಲ್ಲೆ,** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಪ್ರಸನ್ನ ಕುಮಾರ್ ಬಿನ್ ಕೆಂಚೇಗೌಡ, 2ನೇ ದರ್ಜೆ ಗುತ್ತಿಗೆದಾರರು, ನಂ.58, ಬಸ್‌ಸ್ಟ್ಯಾಂಡ್ ಹಿಂಭಾಗ, ಕುವೆಂಪುನಗರ, ಮೂಡಿಗೆರೆ,** (ಇನ್ನು ಮುಂದೆ **'ದೂರುದಾರರು'** ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ **ಶ್ರೀ. ಪ್ರಸನ್ನ ಕುಮಾರ್ ಬಿನ್ ಕೆಂಚೇಗೌಡರವರು** ಚಿಕ್ಕಮಗಳೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಮೂಲಕ ಚಿಕ್ಕಮಗಳೂರು ತಾಲೂಕು ಬೈಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ

ಕೆರೆಮಕ್ಕಿಯಲ್ಲಿ ಅಂಗನವಾಡಿ ಕಟ್ಟಡ ಕಟ್ಟಲು ಗುತ್ತಿಗೆ ಪಡೆದಿರುತ್ತಾರೆ. ಆ ಕಾಮಗಾರಿಯನ್ನು 3 ತಿಂಗಳ ಹಿಂದೆಯೇ ಮುಗಿಸಿದ್ದು, ಒಟ್ಟು 5,16,139.58 ರೂ.ಗಳಿಗೆ ಟೆಂಡರ್ ಪಡೆದುಕೊಂಡಿದ್ದು, ಆ ಪೈಕಿ ಸುಮಾರು 4,00,000/- ಹಣವನ್ನು ಎರಡು ಕಂತುಗಳಲ್ಲಿ ಚೆಕ್ ಮೂಲಕ ಪಡೆದುಕೊಂಡಿರುತ್ತಾರೆ. ಬಾಕಿ ಇರುವ ಸುಮಾರು 1,16,000/- ರೂ. ಮೊತ್ತದ ಬಿಲ್ ಬರಬೇಕಾಗಿದ್ದು, ಆ ಬಗ್ಗೆ ಅಳತೆ ಪುಸ್ತಕದಲ್ಲಿ ಅಳತೆಯನ್ನು ನಮೂದಿಸಿ, ಅದನ್ನು ಲೆಕ್ಕ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎದುರುದಾರರಿಗೆ ಕಳುಹಿಸಿರುತ್ತಾರೆ. ಎದುರುದಾರರು ಅಳತೆ ಪುಸ್ತಕವನ್ನು ಅವರ ಬಳಿಯೇ ಇಟ್ಟುಕೊಂಡಿದ್ದರಿಂದ, ಬಾಕಿ ಬರಬೇಕಾದ ಬಿಲ್‌ನ ಮೊತ್ತದ ಬಗ್ಗೆ ಲೆಕ್ಕ ಶಾಖೆಗೆ ಕಳುಹಿಸಿರುವುದಿಲ್ಲ. ಈ ಬಗ್ಗೆ ದೂರುದಾರರು ಎದುರುದಾರರನ್ನು ಹಲವಾರು ಬಾರಿ ಕಚೇರಿಗೆ ಭೇಟಿ ನೀಡಿ ಕೇಳಿಕೊಂಡರೂ ಸಹ ಎದುರುದಾರರು ಅಳತೆ ಪುಸ್ತಕವನ್ನು ಲೆಕ್ಕ ಶಾಖೆಗೆ ಕಳುಹಿಸದೆ ಸತಾಯಿಸುತ್ತಿರುತ್ತಾರೆ. ದಿ:22/08/2016 ರಂದು ದೂರುದಾರರು ಎದುರುದಾರರನ್ನು ಭೇಟಿಯಾಗಿ ಬಿಲ್‌ನ ಬಗ್ಗೆ ಕೇಳಿದಾಗ, ಎದುರುದಾರರು ಈಗಾಗಲೇ ಬಿಲ್ ಪಾಸಾಗಿರುವ 4,00,000/- ರೂ. ಹಾಗೂ ಬಾಕಿ ಉಳಿದಿರುವ 1,16,000/- ರೂ.ಗಳ ಬಿಲ್ ಪಾಸು ಮಾಡಲು 15,000/- ರೂ.ಗಳ ಲಂಚದ ಹಣವನ್ನು ನೀಡುವಂತೆ ಕೇಳಿದ್ದು, ಆ ಸಂಭಾಷಣೆಯನ್ನು ದೂರುದಾರರ ಸ್ನೇಹಿತ ಬಾಲಕೃಷ್ಣರವರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ ಕಾರಣ ದಿ: 23/08/2016 ರಂದು ಚಿಕ್ಕಮಗಳೂರು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಿಗೆ ಲಿಖಿತ ದೂರನ್ನು ನೀಡಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.02/2016 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯಿದೆ, 2018)ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 23/08/2016ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ, ಅವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ಅವರಿಗೆ ತಿಳಿಸಿದ ನಂತರ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ ದೂರುದಾರರು ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ಹಾಜರುಪಡಿಸಿದ್ದು, ಅದರಲ್ಲಿ ದಿ: 22/08/2016ರಂದು ದೂರುದಾರರು ಎದುರುದಾರರ ಜೊತೆ ಮಾತನಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ತನಿಖಾಧಿಕಾರಿಯವರು

ಕಂಪ್ಯೂಟರ್ ಮುಖಾಂತರ ಒಂದು ಸಿ.ಡಿ.ಗೆ ವರ್ಗಾಯಿಸಿ, ಸದರಿ ಸಿ.ಡಿ.ಯನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಕೇಳಿದರೆ ಕೊಡಲೆಂದು ತಂದಿರುವ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ದೂರುದಾರರು 15,000/- ರೂ. ಗಳನ್ನು (1,000/- ರೂ. ಮುಖಬೆಲೆಯ 12 ನೋಟುಗಳು, 500/- ರೂ. ಮುಖಬೆಲೆಯ 6 ನೋಟುಗಳು) ಹಾಜರುಪಡಿಸಿರುತ್ತಾರೆ. ಸದರಿ ನೋಟುಗಳ ವಿವರಗಳನ್ನು ಪಂಚಸಾಕ್ಷಿ-2 ರವರು ಬಿಳಿ ಹಾಳೆಯಲ್ಲಿ ಮತ್ತು ಸಿಬ್ಬಂದಿಯು ಪಂಚನಾಮೆಯಲ್ಲಿ ನೋಟುಗಳ ವಿವರಗಳನ್ನು ನಮೂದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ ಪಂಚಸಾಕ್ಷಿ-2ರವರ ಮುಖಾಂತರ ತನಿಖಾಧಿಕಾರಿಯು ದೂರುದಾರರ ಶರ್ಟಿನ ಎಡಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣವನ್ನು ಎದುರುದಾರರು ಒತ್ತಾಯಪೂರ್ವಕವಾಗಿ ಕೇಳಿದರೆ ಮಾತ್ರ ತೆಗೆದುಕೊಡುವಂತೆಯೂ, ಎದುರುದಾರರು ಲಂಚದ ಹಣವನ್ನು ಸ್ವೀಕರಿಸಿದ ಬಳಿಕ ಹೊರಬಂದು ಕೈನಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡುವಂತೆ ತಿಳಿಸಿದ್ದಲ್ಲದೆ ಅವರ ಬಳಿ ಹೋಗುವಾಗ ಮೊಬೈಲ್‌ನ್ನು ಆನ್ ಮಾಡಿಕೊಂಡು ಹೋಗುವಂತೆಯೂ ಮತ್ತು ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳುವಂತೆ ಸೂಚನೆ ನೀಡಿರುತ್ತಾರೆ. ನೆರಳುಸಾಕ್ಷಿಗೆ ದೂರುದಾರರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

ದಿ: 23/08/2016ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಸಂಜೆ 4.55 ಗಂಟೆಗೆ ಚಿಕ್ಕಮಗಳೂರಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಕಚೇರಿಯ ಬಳಿ ಬಂದಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ ಎದುರುದಾರರ ಬಳಿ ಕಳುಹಿಸಿದ್ದು, ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕೊಠಡಿಗೆ ಬಂದು ಅವರ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಅವರ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಗೆ ಕೇಳಿದ ಲಂಚದ ಹಣವನ್ನು ಕೊಡುವಂತೆ ಸೂಚಿಸಿರುತ್ತಾರೆ. ಆಗ ದೂರುದಾರರು ಅವರ ಶರ್ಟಿನ ಜೇಬಿನಲ್ಲಿದ್ದ ಪುಡಿಲೇಪಿತ ನೋಟುಗಳನ್ನು ಎದುರುದಾರರು ತೋರಿಸಿದ [illegible]

ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ, ದೂರುದಾರರು ಕಚೇರಿಯಿಂದ ಹೊರಬಂದು ತಲೆಯನ್ನು ಕೈನಿಂದ ಸವರಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ. ಆಗ ತನಿಖಾಧಿಕಾರಿಯವರ ತಂಡ ದೂರುದಾರರ ಬಳಿ ಬಂದಾಗ ದೂರುದಾರರು ಎದುರುದಾರರ ಕಚೇರಿಯ ಒಳಗಡೆ ಕರೆದುಕೊಂಡು ಹೋಗಿ ಎದುರುದಾರರನ್ನು ತೋರಿಸಿದ್ದು ಮತ್ತು ಎದುರುದಾರರ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಯನ್ನು ತೋರಿಸಿ ಎದುರುದಾರರು ತಿಳಿಸಿದ ಮೇರೆಗೆ ಅವರಿಗೆ ಲಂಚದ ಹಣ ನೀಡಿದ್ದಾಗಿ ದೂರುದಾರರು ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಯವರು ಎದುರುದಾರರನ್ನು ಮತ್ತು ಎದುರುದಾರರ ಜೊತೆಗಿದ್ದ ಕಿಶೋರ್‌ನನ್ನು ವಶಕ್ಕೆ ಪಡೆದು ತನಿಖೆಗೆ ಸಹಕರಿಸುವಂತೆ ಕೇಳಿದಾಗ ಎದುರುದಾರರು ಒಪ್ಪಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನ ದ್ರಾವಣದಲ್ಲಿ ಕಿಶೋರ್‌ರವರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನ ದ್ರಾವಣದಲ್ಲಿ ಕಿಶೋರ್‌ರವರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯು ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸುವಂತೆ ಕೇಳಿದಾಗ ಕಿಶೋರ್‌ರವರು ಧರಿಸಿದ್ದ ಪ್ಯಾಂಟಿನ ಮುಂಭಾಗದ ಬಲಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿ ಹಾಜರುಪಡಿಸಿರುತ್ತಾರೆ. ನಂತರ ಸದರಿ ಹಣದ ವಿವರಗಳನ್ನು ನೆರಳುಸಾಕ್ಷಿ ಮುಖಾಂತರ ಪರಿಶೀಲಿಸಲಾಗಿ, ಆ ನೋಟುಗಳ ವಿವರಗಳು ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ವಿವರಗಳಿಗೆ ತಾಳೆಯಾದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಕಿಶೋರ್‌ರವರಿಗೆ ಬೇರೊಂದು ಪ್ಯಾಂಟನ್ನು ನೀಡಿ ಅವರು ಧರಿಸಿದ ಪ್ಯಾಂಟಿನ್ನು ಬಿಚ್ಚಿಸಿ, ಆ ಪ್ಯಾಂಟಿನ ಬಲಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ದೂರುದಾರರಿಗೆ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳಲು ನೀಡಿದ್ದ ಮೊಬೈಲ್ ಸ್ವಿಚ್ ಆಫ್ ಆದ ಕಾರಣ ಸಂಭಾಷಣೆಗಳು ಧ್ವನಿಮುದ್ರಿತವಾಗಿರುವುದಿಲ್ಲವೆಂದು ತನಿಖಾಧಿಕಾರಿಯವರಿಗೆ ತಿಳಿಸಿರುತ್ತಾರೆ ಮತ್ತು ದೂರುದಾರರಿಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ಪ್ರತಿಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಕಿಶೋರ್‌ರವರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಅವರು ಅವರ ಸಮಜಾಯಿಷಿಯಲ್ಲಿ "ದಿ: 23/08/2016 ರಂದು ತಾಂಬೆ ಸರ್ ಅವರಿಗೆ ಕಾಯುತ್ತಿದ್ದಾಗ, ತಾಂಬೆ ಸರ್ ರವರು ಬಂದರು, ನಂತರ ಹಸಿರು ಬಣ್ಣದ ಶರ್ಟ್ ಧರಿಸಿದ ವ್ಯಕ್ತಿ ಬಂದು ತಾಂಬೆ ಸರ್ ಜೊತೆ ಮಾತನಾಡಿ, ನಂತರ ತಾಂಬೆ ಸರ್‌ರವರು ಹಸಿರು ಶರ್ಟಿನ ವ್ಯಕ್ತಿ ಹಣವನ್ನು ನೀಡುತ್ತಾನೆ ಅದನ್ನು ತೆಗೆದುಕೋ ಎಂದು ತಿಳಿಸಿದ ಮೇರೆಗೆ ನಾನು ಹಣವನ್ನು ಪಡೆದುಕೊಂಡು ನನ್ನ ಜೇಬಿನಲ್ಲಿಟ್ಟುಕೊಂಡಿರುತ್ತೇನೆ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಸತ್ಯವೆಂದು ತಿಳಿಸಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಿದಾಗ ಕಚೇರಿಯಲ್ಲಿ ಹಾಜರಿದ್ದ ಜೆ.ಇ., ಕರುಣೇಶಪ್ಪ ಎಫ್.ಡಿ.ಎ., ಚೇತನ್ ಎಸ್.ಡಿ.ಎ., ಕುಮಾರ್ ಸ್ವಾಮಿ ಇವರುಗಳ ಮುಂದೆ ಎದುರುದಾರರು ಕುಸಿದು ಬಿದ್ದ ಕಾರಣ, ಎದುರುದಾರರನ್ನು ಇಲಾಖಾ ವಾಹನದಲ್ಲಿ ಎಸ್.ಡಿ.ಎ. ಕುಮಾರಸ್ವಾಮಿರವರೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರಿಂದ ಎದುರುದಾರರ ಲಿಖಿತ ಸಮಜಾಯಿಷಿಯನ್ನು ಪಡೆದುಕೊಂಡಿರುವುದಿಲ್ಲ. ದಿ: 22/08/2016 ರಂದು ಎದುರುದಾರರ ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಎದುರುದಾರರ ಕಚೇರಿಯ ಸೂಪರಿಂಟೆಂಡೆಂಟ್ ಆದ ಶ್ರೀ ಕುಮಾರ್‌ರವರಿಗೆ ಕೇಳಿಸಲಾಗಿ ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ, ನಂತರ ಕಿಶೋರ್‌ನನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಇತರೆ ಎಲ್ಲಾ ಕ್ರಮಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿ, ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ದಿ: 20/09/2016 ರಂದು ತನಿಖಾಧಿಕಾರಿಯವರು ಎದುರುದಾರರನ್ನು ಠಾಣೆಗೆ ಕರೆಯಿಸಿ ಎದುರುದಾರರ ಮಾದರಿ ಧ್ವನಿಯ ಸಂಭಾಷಣೆಯನ್ನು ಪಡೆದು, ಆ ಮಾದರಿ ಧ್ವನಿಯ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಸಿ.ಡಿ.ಯನ್ನು ವಶಕ್ಕೆ ಪಡೆದಿರುತ್ತಾರೆ. ಸದರಿ ಮಹಜರ್‌ಗೆ ಪಂಚಸಾಕ್ಷಿದಾರರ ಮತ್ತು ಎದುರುದಾರರ ಸಹಿ ಪಡೆದಿರುತ್ತಾರೆ. ಅದೇ ದಿನ ಎದುರುದಾರರು ತನಿಖಾಧಿಕಾರಿಯವರಿಗೆ ಸಮಜಾಯಿಷಿಯನ್ನು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯ ಪ್ಯಾರಾ-2ರಲ್ಲಿ ದಿ: 23/08/2016ರಂದು ಸಂಜೆ 4.15 ಗಂಟೆಗೆ ಕಛೇರಿಗೆ ಬಂದಾಗ ಕಿಶೋರ್‌ರವರು ನನಗಾಗಿ ಕಾಯುತ್ತಿದ್ದರು, ಬಿದರೆ ಗ್ರಾಮ

ಪಂಚಾಯಿತಿ ರಾಜೀವ್ ಗಾಂಧಿ ಕೇಂದ್ರ ಸೇವಾ ಕಟ್ಟಡದ ಅಂದಾಜು ಪಟ್ಟಿಯನ್ನು ಪರಿಶೀಲನೆ ಮಾಡುತ್ತಿರುವಾಗ, ಅದೇ ಸಮಯಕ್ಕೆ ಗುತ್ತಿಗೆದಾರರಾದ ಶ್ರೀ. ಪ್ರಸನ್ನಕುಮಾರ್‌ರವರು ಬಂದು ಕೆರೆಮಕ್ಕಿ ಅಂಗನವಾಡಿ ಕಾಮಗಾರಿ ಬಗ್ಗೆ ವಿಚಾರಿಸಿದಾಗ ಹಸ್ತಾಂತರಪತ್ರವನ್ನು ಕೇಳಿದರು, ಆ ಬಗ್ಗೆ ಗ್ರಾಮಸ್ಥರ ದೂರು ಇರುವುದರಿಂದ ಕಾಮಗಾರಿ ಸರಿಪಡಿಸಿ, ಪತ್ರವನ್ನು ನೀಡುತ್ತೇನೆಂದು ಹೇಳಿದೆ. ಆ ಸಮಯದಲ್ಲಿ ಕಿಶೋರ್ ಹತ್ತಿರ ಪ್ರಸನ್ನ ಏನು ಕೊಟ್ಟರು ಆ ಸಂದರ್ಭದಲ್ಲಿ ಇಬ್ಬರು ಏನೋ ನಿಧಾನವಾಗಿ ಮಾತನಾಡಿಕೊಂಡರು. ಆ ಸಮಯಕ್ಕೆ ತಾವು ಬಂದಿರುತ್ತೀರೆಂದು ಸಮಜಾಯಿಷಿ ಬರೆದುಕೊಟ್ಟಿರುತ್ತಾರೆ. ಆ ಸಮಜಾಯಿಷಿಯು ಕಿಶೋರ್‌ರವರು ನೀಡಿದ ಸಮಜಾಯಿಷಿಗೆ ವ್ಯತಿರಿಕ್ತವಾಗಿರುತ್ತದೆ. ಆ ಕಾರಣ, ಸದರಿ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲ.

iii) ಧ್ವನಿ ಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಕಿಶೋರ್‌ರವರಿಂದ ವಶಪಡಿಸಿಕೊಂಡ ವಸ್ತುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಸದರಿ ಪರಿವೀಕ್ಷಣಾ ಟಿಪ್ಪಣಿಯು ದಿ: 04/11/2021ರಂದು ಜಾರಿಯಾಗಿರುತ್ತದೆ. ಎದುರುದಾರರಿಗೆ ಸುಮಾರು ಮೂರು ತಿಂಗಳ ಕಾಲಾವಕಾಶ ನೀಡಿದರೂ ಎದುರುದಾರರು ಯಾವುದೇ ಸಮಜಾಯಿಷಿಯುನ್ನು ಸಲ್ಲಿಸಿರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಧ್ವನಿ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು

ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 05/05/2022

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.